# ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ,ಶೇಷಾದ್ರಿ ರಸ್ತೆ, ಬೆಂಗಳೂರು-560 001.

ದೂರವಾಣಿ- 080-22224212


**ಸಂಖ್ಯೆ.** DPAR 07 CHULOSA (MC) 2024 **ದಿನಾಂಕ:** 05.05.2024

## ಸಾರ್ವತ್ರಿಕ ಲೋಕಸಭಾ ಚುನಾವಣೆ-2024
## ಮತ್ತು ಉಪ ಚುನಾವಣೆ 36-ಸುರಪುರ ವಿಧಾನಸಭಾ ಕ್ಷೇತ್ರ-2024

## ಪತ್ರಿಕಾ ಪ್ರಕಟಣೆ

### 1. ಚುನಾವಣಾ ವೆಚ್ಚದ ಮೇಲ್ವಿಚಾರಣೆ :
**ಜಪ್ತಿ:**

ಮೌಲ್ಯ ರೂ. ಕೋಟಿಯಲ್ಲಿ

| ಜಪ್ತಿ ಮಾಡಲಾದ ವಸ್ತುಗಳು | | | ಪೊಲೀಸ್/ ಕ್ಷಿಪ್ರ ಪಡೆಗಳು (FST)/ ಸ್ಥಿರ ಕಣ್ಗಾವಲು ತಂಡಗಳು(SST)/ | | ಅಬಕಾರಿ | | ಆದಾಯ ತೆರಿಗೆ | | ವಾಣಿಜ್ಯ ತೆರಿಗೆ | | ಒಟ್ಟು ಮೊತ್ತ | |
|---|---|---|---|---|---|---|---|---|---|---|---|---|
| | | | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು | ಹಿಂದಿನ ದಿನದವರೆಗೂ | ಪ್ರಗತಿಯಲ್ಲಿರುವುದು |
| **ನಗದು** | | ಮೌಲ್ಯ | 0.03 | 71.74 | - | - | - | 27.15 | - | - | 0.03 | 98.89 |
| **ಮದ್ಯ** | | Qty (in lakhs ltrs) | 0.00330 | 0.22 | 0.01 | 147.45 | - | - | - | - | 0.01 | 147.67 |
| | | ಮೌಲ್ಯ | 0.01433 | 0.91 | 0.04 | 178.30 | - | - | - | - | 0.05 | 179.21 |
| **ಡ್ರಗ್ಸ್** | | Qty (KGs) | 12.50 | 509.46 | - | 129.12 | - | - | - | - | 12.50 | 638.57 |
| | | ಮೌಲ್ಯ | 0.09 | 11.52 | - | 0.36 | - | - | - | - | 0.09 | 11.89 |
| **ಅಮೂಲ್ಯ ಲೋಹ** | **ಚಿನ್ನ** | Qty (KGs) | - | 70.58 | - | - | 0.75 | 32.81 | - | 36.31 | 0.75 | 139.69 |
| | | ಮೌಲ್ಯ | - | 43.22 | - | - | 0.47 | 21.60 | - | 13.51 | 0.47 | 78.33 |
| | **ಬೆಳ್ಳಿ** | Qty (KGs) | - | 294.78 | - | - | - | - | - | 7.59 | - | 302.37 |
| | | ಮೌಲ್ಯ | - | 1.12 | - | - | - | - | - | 0.06 | - | 1.18 |
| | **ವಜ್ರ** | Qty (carat) | - | - | - | - | - | 47.23 | - | - | - | 47.23 |
| | | ಮೌಲ್ಯ | - | - | - | - | - | 1.22 | - | - | - | 1.22 |
| **ಉಚಿತ ಉಡುಗೊರೆ** | | ಮೌಲ್ಯ | - | 2.50 | - | - | - | - | - | 7.03 | - | 9.53 |
| **ಇತರೆ** | | ಮೌಲ್ಯ | - | 12.15 | - | 0.03 | - | - | - | 60.31 | - | 72.48 |
| ಒಟ್ಟು ಮೊತ್ತ | | | **0.14** | **143.16** | **0.04** | **178.68** | **0.47** | **49.97** | **-** | **80.91** | **0.65** | **452.72** |

### 2. ದಾಖಲಾದ ಪ್ರಕರಣಗಳ ಕುರಿತು ಮಾಹಿತಿ:

**a.** ಕ್ಷಿಪ್ರ ಪಡೆಗಳು (**FS**), ಸ್ಥಿರ ಕಣ್ಗಾವಲು ತಂಡಗಳು (**SST**) ಮತ್ತು ಪೊಲೀಸ್ ಅಧಿಕಾರಿಗಳು ನಗದು, ಮದ್ಯ, ಡ್ರಗ್ಸ್, ಬೆಲೆಬಾಳುವ ಲೋಹ ಮತ್ತು ಉಚಿತ ಉಡುಗೊರೆ (**Freebies**) ವಶಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ **2,301** ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ.

**b.** ಅಬಕಾರಿ ಇಲಾಖೆ ಘೋರ ಅಪರಾಧ ಅಡಿಯಲ್ಲಿ **3,384** ಪ್ರಕರಣಗಳನ್ನು ದಾಖಲಿಸಿದೆ**,** ಪರವಾನಗಿ ಉಲ್ಲಂಘನೆ ಅಡಿಯಲ್ಲಿ **5,565** ಪ್ರಕರಣ ದಾಖಲಿಸಿದೆ. NDPS ಅಡಿಯಲ್ಲಿ **193** ಪ್ರಕರಣಗಳನ್ನು ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಸೆಕ್ಷನ್ 15(a) ಅಡಿಯಲ್ಲಿ **34,530** ಪ್ರಕರಣಗಳನ್ನು ದಾಖಲಿಸಿದೆ, ಮತ್ತು **2,071** ವಿವಿಧ ರೀತಿಯ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

3. **ವಿಶೇಷ ವರದಿಗಳು:**
ಆದಾಯ ತೆರಿಗೆ ಇಲಾಖೆಯವರು, ರೂ.**47,47,000/-** ಮೌಲ್ಯದ **750 gram**, ಚಿನ್ನವನ್ನು, ಉತ್ತರ ಕನ್ನಡ ಲೋಕಸಭಾ ಕ್ಷೇತ್ರ, ಉತ್ತರ ಕನ್ನಡ ಜಿಲ್ಲೆ, ಇಲ್ಲಿ ವಶಪಡಿಸಿಕೊಂಡಿದ್ದಾರೆ**.**

4. **ಸಾರ್ವಜನಿಕ ಕುಂದು ಕೊರತೆ ಪರಿಹಾರ:**
ಮತದಾರರ ಸಹಾಯವಾಣಿಯ ಮೂಲಕ ಸ್ವೀಕರಿಸಿದ **38,580** ಕರೆಗಳ ಪೈಕಿ **38,260** ಜನರು ಮಾಹಿತಿಯನ್ನು ಕೋರಿದ್ದಾರೆ, **39** ನಾಗರೀಕರು ಪ್ರತಿಕ್ರಿಯೆ ನೀಡಿದ್ದಾರೆ, **36** ನಾಗರೀಕರು ಸಲಹೆಗಳನ್ನು ನೀಡಿದ್ದಾರೆ ಮತ್ತು **245** ನಾಗರೀಕರು ದೂರುಗಳನ್ನು ದಾಖಲಿಸಿದ್ದಾರೆ. ಒಟ್ಟು **38,580** ಕರೆಗಳನ್ನು ವಿಲೇವಾರಿ ಮಾಡಲಾಗಿದೆ. ಹೆಚ್ಚುವರಿಯಾಗಿ NGRS ಪೋರ್ಟಲ್‌ನಲ್ಲಿ **21,634** ನಾಗರೀಕರಿಂದ ದೂರುಗಳನ್ನು ದಾಖಲಿಸಲಾಗಿದೆ, ಅದರಲ್ಲಿ **21,017** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

5. **ಸಿವಿಜಿಲ್ (cVIGIL):**
cVIGIL ಅಪ್ಲಿಕೇಶನ್ ಮೂಲಕ **30,056** ದೂರುಗಳನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಿದ ಪ್ರಮುಖ **17,224** ದೂರುಗಳು ಅನುಮತಿಯಿಲ್ಲದ ಪೋಸ್ಟರ್‌ಗಳು/ಬ್ಯಾನರ್‌ಗಳಿಗೆ ಸಂಬಂಧಿಸಿವೆ, **1,144** ಕಡ್ಡಾಯ ಘೋಷಣೆ ಇಲ್ಲದ ಪೋಸ್ಟರ್‌ಗಳು, ಆಸ್ತಿ ವಿರೂಪಗೊಳಿಸುವಿಕೆ **346,** ಹಣವಿತರಣೆ **256**, ಉಡುಗೊರೆಗಳು/ಕೂಪನ್‌ಗಳ ವಿತರಣೆ **151,** ನಿಷೇಧದ ಅವಧಿಯಲ್ಲಿ ಪ್ರಚಾರ **73**, ಮದ್ಯಹಂಚಿಕೆ **158,** ಅನುಮತಿಯಿಲ್ಲದೆ ವಾಹನ ಬೆಂಗಾವಲು **148**, ಧಾರ್ಮಿಕ ಅಥವಾ ಸಮುದಾಯಿಕ ಭಾಷಣಗಳು/ಸಂದೇಶಗಳು **87,** ಬಂದೂಕುಗಳ ಪ್ರದರ್ಶನ ಬೆದರಿಕೆ **75,** ಇತರೆ **28,337** ಇವುಗಳಲ್ಲಿ ದೂರುಗಳು ಸರಿಯಾಗಿವೆ ಎಂದು ಕಂಡುಹಿಡಿದು ಸೂಕ್ತಕ್ರಮ ಕೈಗೊಳ್ಳಲಾಗಿದೆ.

6. **ಮಾಧ್ಯಮ (Media):**
ಇಮೇಲ್ ಮೂಲಕ ಸ್ವೀಕರಿಸಿದ **410** ದೂರುಗಳು ಮತ್ತು ಪತ್ರಗಳ ಮೂಲಕ ಸ್ವೀಕರಿಸಿದ **909** ದೂರುಗಳು ಸುದ್ದಿ ಪತ್ರಿಕೆಗಳು ಮೂಲಕ ಸ್ವೀಕರಿಸಿದ **41** ದೂರುಗಳು, ಟಿವಿ ಚಾನೆಲ್‌ಗಳ ಮೂಲಕ ಸ್ವೀಕರಿಸಿದ **81** ದೂರುಗಳು ಮತ್ತು ಸಾಮಾಜಿಕ ಜಾಲತಾಣ ಮಾಧ್ಯಮ ಮೂಲಕ ಸ್ವೀಕರಿಸಿದ **93** ದೂರುಗಳು ಹೀಗೆ ಒಟ್ಟು ಸ್ವೀಕರಿಸಿದ **1,534** ದೂರುಗಳ ಪೈಕಿ **1,534** ದೂರುಗಳನ್ನು ವಿಲೇವಾರಿ ಮಾಡಲಾಗಿದೆ

7. **ಸುವಿಧಾ (SUVIDHA):**
ಸುವಿಧಾ ಅಡಿಯಲ್ಲಿ ಅನುಮತಿಗಳಿಗಾಗಿ, **11,995** ಅರ್ಜಿಗಳು ಸ್ವೀಕರಿಸಲಾಗಿದೆ, ಅದರಲ್ಲಿ **10,021** ಅರ್ಜಿಗಳನ್ನು ಅಂಗೀಕರಿಸಲಾಗಿದೆ ಮತ್ತು **1,414** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. **22** ಅರ್ಜಿಗಳು ಪ್ರಗತಿಯಲ್ಲಿದೆ. **143** ಅರ್ಜಿಗಳು ಬಾಕಿ ಉಳಿದಿವೆ ಮತ್ತು **395** ಅರ್ಜಿಗಳನ್ನು ರದ್ದುಗೊಳಿಸಲಾಗಿದೆ.

## ಮತದಾರರಿಗೆ ಮನವಿ

ಮತದಾನದ ದಿನದಂದು ಮತಗಟ್ಟೆಗಳಲ್ಲಿ ಬಿಸಿಲಿನ ತಾಪವನ್ನು ಗಮನದಲ್ಲಿಟ್ಟುಕೊಂಡು ಮತದಾರರಿಗೆ ಅನುಕೂಲವಾಗುವಂತೆ ಈ ಕೆಳಗಿನ ಕ್ರಮಗಳನ್ನು ಅಳವಡಿಸಲಾಗಿದೆ. ಎಲ್ಲಾ ಮತದಾರರು **07.05.2024** ರಂದು ತಮಗೆ ಗೊತ್ತುಪಡಿಸಿದ ಮತಗಟ್ಟೆಗಳಲ್ಲಿ ಮತ ಚಲಾಯಿಸಲು ವಿನಂತಿಸಲಾಗಿದೆ:

- ಮತಗಟ್ಟೆಗಳಲ್ಲಿ ಎಲ್ಲಾ ಕನಿಷ್ಠ ಸೌಲಭ್ಯಗಳಾದ ರಾಂಪ್ ಸೌಲಭ್ಯ, ಕುಡಿಯುವ ನೀರು, ವಿದ್ಯುತ್, ಪೀಠೋಪಕರಣಗಳು, ಪುರುಷರು ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಮತ್ತು ಮತದಾರರಿಗೆ ಸಹಾಯವಾಗಲು ಸಂಕೇತ ಫಲಕಗಳನ್ನು ಅಳವಡಿಸಲಾಗಿದೆ.
- ದಿವ್ಯಾಂಗ(PWD) ಮತ್ತು ಹಿರಿಯ ನಾಗರಿಕ ಮತದಾರರಿಗೆ ಸಹಾಯ ಮಾಡಲು ಸಹಾಯಕರು ಲಭ್ಯವಿರುತ್ತಾರೆ.
- ಮತಗಟ್ಟೆಯ ಅಕ್ಕಪಕ್ಕದ ಕೊಠಡಿಗಳನ್ನು ವಿಶ್ರಾಂತಿ ಕೊಠಡಿಗಳನ್ನಾಗಿ ಮಾರ್ಪಡಿಸಿ ಸಿದ್ಧವಿರಿಸಲಾಗಿದೆ.
- ಎಲ್ಲೆಲ್ಲಿ ವಿಶ್ರಾಂತಿ ಕೊಠಡಿಗಳು ಲಭ್ಯವಿಲ್ಲವೋ, ಅಂತಹ ಮತಗಟ್ಟೆ ಆವರಣದಲ್ಲಿ ಶಾಮಿಯಾನ, ಫ್ಯಾನ್ ಮತ್ತು ಆಸನದ ವ್ಯವಸ್ಥೆ ಮಾಡಲಾಗಿದೆ.
- ಮತಗಟ್ಟೆ ಆವರಣದಲ್ಲಿ ಶೂಶ್ರೂಷಕರು/ ಆಶಾ ಕಾರ್ಯಕರ್ತರೊಂದಿಗೆ ORS / ವೈದ್ಯಕೀಯ ಕಿಟ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ತುರ್ತು ಸಂದರ್ಭಗಳಲ್ಲಿ ಆಂಬ್ಯುಲೆನ್ಸ್ ಸೇವೆಯ ಸೌಲಭ್ಯವಿರುತ್ತದೆ.

- ಮತದಾರರಿಗೆ ಈಗಾಗಲೇ ನೀಡಲಾಗಿರುವ ಮತದಾರರ ಚೀಟಿಗಳಲ್ಲಿ ಮತದಾನ ಹಾಗೂ ಮತಗಟ್ಟೆಗಳ ಕುರಿತು ಸೂಚನೆಗಳು ಮತ್ತು ಗೂಗಲ್ ನಕ್ಷೆಗಳ ಕ್ಯೂಆರ್ ಕೋಡ್ ಅಳವಡಿಸಲಾಗಿದ್ದು, ಎಲ್ಲಾ ಮನೆಗಳಿಗೆ ವಿತರಿಸಲಾಗಿದೆ. ನಗರ ಪ್ರದೇಶಗಳಲ್ಲಿ, ಮತದಾರರ ಮಾಹಿತಿ ಸ್ಲಿಪ್‌ಗಳು ಕ್ಯೂಆರ್ ಕೋಡ್ ಅನ್ನು ಒಳಗೊಂಡಿರುತ್ತವೆ, ಇದನ್ನು ಸ್ಕ್ಯಾನ್ ಮಾಡಿದಾಗ QR ಕೋಡ್ ಗೂಗಲ್ ನಕ್ಷೆಗಳ ಮೂಲಕ ಮತದಾನ ಕೇಂದ್ರ ತಲುಪಲು ಸಹಾಯ ಮಾಡುತ್ತದೆ.

**07.05.2024** ರಂದು ನಡೆಯುವ 14 ಲೋಕಸಭಾ ಕ್ಷೇತ್ರಗಳ ಚುನಾವಣೆಯಲ್ಲಿ **560** ಮತಗಟ್ಟೆಗಳನ್ನು ಮಹಿಳೆಯರು ನಿರ್ವಹಿಸುತ್ತಾರೆ, **112** ಮತಗಟ್ಟೆಗಳನ್ನು ದಿವ್ಯಾಂಗರು ನಿರ್ವಹಿಸುತ್ತಾರೆ ಮತ್ತು **224** ಇತರೆ ವಿಷಯಗಳ ಮಾದರಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ, ಮತಗಟ್ಟೆಗಳನ್ನು ಸ್ಥಳೀಯ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಪ್ರತಿಬಿಂಬಿಸುವಂತೆ ಅಲಂಕರಿಸಲಾಗುತ್ತಿದೆ.








